ಖಂಡಿತವಾಗಿಯೂ ನಾನು ಬರಬೇಕಾದದ್ದೇ. ಆದರೆ ಇನ್ನೊಮ್ಮೆ ನಿಮ್ಮ ಅಂಗಳದ ಮೂಲೆಯಲ್ಲಿ ಊಟ ಮಾಡಿ ಸೆಗಣಿಯಿಂದ ಎಂಜಲು ಸಾರಿಸುವ ದೈಹಿಕ ಮತ್ತು ಮಾನಸಿಕ ಸ್ಥೈರ್ಯ ಎರಡನ್ನೂ ಕಳಕೊಂಡಿದ್ದೇನೆ. ನಿಮ್ಮ ಅಮ್ಮನ ಆತ್ಮದೊಂದಿಗೆ ಕ್ಷಮೆ ಕೇಳುತ್ತೇನೆ. ದಯವಿಟ್ಟು ನೀವು ಮಾತ್ರ ತಪ್ಪು ತಿಳಿಯಬಾರದು' ಎಂದಿದ್ದಳು. ಹಿಂದಿನ ಘಟನೆಗಳಿಂದಾಗಿ ಅವಳಿಗಿಂತ ಹೆಚ್ಚು ನೊಂದಿದ್ದ ಅವ ಸುಮ್ಮನಾಗಿದ್ದ.

ಕಾರ್ಯಕ್ರಮವೆಲ್ಲ ಅನುಕ್ರಮವಾಗಿ ನಡೆದಿದ್ದುವು. ಬಹಳ ಜಬರ್ದಸ್ತಿನಿಂದಲೇ ನಡೆಸಿದ್ದರು. ಕೈ ಬಿಚ್ಚಿ ಹಣ ಕೊಡಲು ಇವನೇ ಇರುವಾಗ ಖರ್ಚು ಮಾಡಲು ಅವರಿಗೇನು ತೊಂದರೆ. ತಮಗೆ ಬೇಕಿದ್ದವರಿಗೆ ಮತ್ತು ತಮ್ಮ ತಮ್ಮ ಹೆಂಡಿರ ಪೈಕಿಯವರಿಗೆ ದಾನ ದಕ್ಷಿಣೆ ಧಂಡಿಯಾಗಿ ಸಿಗುವಂತೆ ನೋಡಿಕೊಂಡಿದ್ದರು. ಕಾರ್ಯ ಕ್ರಮವೆಲ್ಲ ಮುಗಿದು ವೈಕುಂಠದ ದಿನ ಪುನಃ ಅದೇ ಪುನರಾವರ್ತನೆ. ಭರ್ಜರಿ ಊಟ ಮುಗಿಸಿ ಅಣ್ಣಂದಿರೆಲ್ಲ ಒಟ್ಟಿಗೆ ಕುಳಿತು ವೀಳ್ಯಕ್ಕೆ ಸುಣ್ಣ ಹಚ್ಚುತ್ತ ಮಾತಿಗೆ ತೊಡಗಿದ್ದರು. ಅಮ್ಮನನ್ನು ತಾನು ಹೇಗೆ ನೋಡಿಕೊಂಡೆ ಎಂದು ಒಬ್ಬನೆಂದರೆ ತನಗೆಷ್ಟು ಖರ್ಚಾಯಿತೆಂದು ಇನ್ನೊಬ್ಬ. ಅಮ್ಮನ ಕಾಯಿಲೆಯಿಂದಾಗಿ ಹಾಳಾದ ಕೆಲಸದಿಂದ ತನಗೆಷ್ಟು ನಷ್ಟವಾಯಿತೆಂದು ಇನ್ನೊಬ್ಬನೆಂದರೆ ಮತ್ತೊಬ್ಬ ತನ್ನ ಇದ್ದೆಲ್ಲ ರಜೆಯೂ ಖಾಲಿಯಾಗಿ ಮುಂದಿನ ತಿಂಗಳು ನಡೆಯಲಿದ್ದ ಹೆಂಡತಿಯ ತಂಗಿಯ ಮದುವೆಗೆ ಸಂಬಳವಿಲ್ಲದ ರಜೆ ಹಾಕಬೇಕಾದೀತೆಂದು ಗೋಳಿಡಲು ಪ್ರಾರಂಭಿಸಿದ್ದ.

ತಮ್ಮ ತಮ್ಮ ಗೋಳಿನ ಕತೆಗಳನ್ನು ಹೇಳುತ್ತಿದ್ದ ಪ್ರತಿಯೊಬ್ಬರೂ ಅಮ್ಮನಿಂದಾಗಿ ತಮಗಾದ ನಷ್ಟದ ಪಟ್ಟಿಯನ್ನೇ ಒಪ್ಪಿಸುತ್ತಿದ್ದರು. ಅಮ್ಮನ ಕಾಯಿಲೆ ಮತ್ತು ಕಾರ್ಯದ ಖರ್ಚೆಲ್ಲವನ್ನು ಮಾಡಿಯೂ ಸುಮ್ಮನಿದ್ದ ಇವನ ಅಸ್ತಿತ್ವವನ್ನು ಯಾರೂ ಗಣನೆಗೆ ತೆಗೆದುಕೊಂಡ ಹಾಗೇ ಕಾಣಲಿಲ್ಲ. ಮಾತುಕತೆ ಮುಗಿಯುತ್ತ ಬಂದಂತೆ ಒಳಗಿನಿಂದ ಬಂದ ಅಣ್ಣಂದಿರ ಹೆಂಡಂದಿರು ಒಂದಿಷ್ಟು ಬಟ್ಟೆಯ ಗಂಟು ಮತ್ತು ಡಬ್ಬಗಳನ್ನು ತಂದು ಅವರೆದುರಿಗೆ ಮೇಜಿನ ಮೇಲೆ ಬಿಡಿಸಿದ್ದರು. ನೋಡಿದರೆ ಅಮ್ಮನ ಚಿನ್ನ. ಎಲ್ಲ ಹದ್ದುಗಳಂತೆ ಎರಗಿದ್ದರು. ಅದು ನನಗೆ ಇದು ನಿನಗೆ ಎಂದು ಒಬ್ಬೊಬ್ಬರೂ ಪಾಲು ಮಾಡಿಕೊಂಡಿದ್ದರು. ಅಕ್ಕ ತಂಗಿಯರೂ ತಾಯಿ ಇದ್ದಷ್ಟೂ ದಿನ ತಪ್ಪಿಯೂ ತೋರಿಸದಿದ್ದ ಪ್ರೀತಿಯ ಮಳೆಯನ್ನೇ ಈಗ ಕರೆಯುವವರಂತೆ 'ಅಯ್ಯೋ ನಮ್ಮ ಅಮ್ಮ ನನ್ನನ್ನು ಎಷ್ಟು ಹಚ್ಚಿಕೊಂಡಿದ್ದಳೆಂದರೆ ಪ್ರತೀ ವರ್ಷ ಗೌರಿ ಹಬ್ಬದ ದಿನ ನಾನು ಬರದೆ ಊಟವನ್ನೇ ಮಾಡುತ್ತಿರಲಿಲ್ಲ' ಎಂದಿದ್ದಳು. ಇನ್ನೊಬ್ಬಳು 'ಅಮ್ಮನಿಗೆ ದಿನಕ್ಕೊಮ್ಮೆಯಾದರೂ ನನ್ನ ಹತ್ತಿರ ಮಾತನಾಡದೆ ಇದ್ದರೆ ಊಟವೇ ಸೇರುತ್ತಿರಲಿಲ್ಲವಂತೆ. ಹಾಗಾಗಿಯೇ ತಾನೆ ಅತ್ತೂ ಕರೆದು ಮನೆಗೆ ಫೋನ್ ಹಾಕಿಸಿಕೊಂಡಿದ್ದು' ಮತ್ತೊಬ್ಬಳಂತೂ ಇನ್ನೇನನ್ನೋ ಹೇಳುವುದರಲ್ಲಿದ್ದಳು ಅಷ್ಟರಲ್ಲಿ ಮೇಜಿನ ಮೇಲೆ ಹರಡಿದ್ದ ಆಭರಣಗಳು ಖಾಲಿಯಾಗುತ್ತಿದ್ದುದನ್ನು ಕಂಡು ಗಾಬರಿಯಾಗಿ ಮಾತುಗಳನ್ನು ನುಂಗಿಕೊಂಡು ತಾನೂ ಕೈ ಚಾಚಿದ್ದಳು. ಅಂತೂ ಕ್ಷಣಾರ್ಧದಲ್ಲಿ ಮೂವತ್ತು ನಲವತ್ತಕ್ಕಿಂತ ಹೆಚ್ಚಿದ್ದ ಆಭರಣಗಳು ಖಾಲಿಯಾಗಿದ್ದವು.

ಅಲ್ಲಿಯೇ ಪಕ್ಕದಲ್ಲಿ ನಿಂತಿದ್ದ ಇವನನ್ನು ಯಾರೂ ಗಮನಿಸಲಿಲ್ಲ. ಅಲ್ಲ ಗಮನಿಸದವರಂತೆ ನಟಿಸಿದರು. ಆ ಆಭರಣಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅವನ ಸ್ವಂತ ಸಂಪಾದನೆಯಲ್ಲಿ ಮಾಡಿಸಿಕೊಟ್ಟದ್ದು ಎನ್ನುವುದನ್ನು ಹೇಳಲು ಅಥವಾ ಕೇಳಿಸಿಕೊಳ್ಳಲು ಯಾರೂ ತಯಾರಿರಲಿಲ್ಲ. ಇನ್ನೇನು ಎಲ್ಲ ಖಾಲಿಯಾಗಿ ಅಡಿಯಿದ್ದ ಬಟ್ಟೆಯನ್ನು ಒದರಬೇಕಿತ್ತು. ಮೂಲೆಯಲ್ಲಿ ಚಿಕ್ಕ ನತ್ತೊಂದು ಹಾಗೆಯೇ ಉಳಿದಿತ್ತು. ಇವ ಅಂಗಲಾಚಿದ್ದ. 'ಆ ನತ್ತನ್ನು ನನಗೆ ಕೊಡಿ...